ಅ) ಚಿತ್ರದುರ್ಗದಿಂದ ತುರುವನೂರು, ದೊಡ್ಡಗಟ್ಟ, ಉಪಾರಟ್ಟಿ, ಕಡಬಕಟ್ಟಿ, ವಂಸ್ತ್ರರು, ದೊಣ್ಣೇಹಳ್ಳಿ, ಜಗಳೂರು, ಚಿಕ್ಕಮ್ಮನಹಟ್ಟಿ, ಚಿಕ್ಕಬನ್ನಿಹಟ್ಟಿ, ಹಿರೇಬನ್ನಿಹಟ್ಟಿ, ಸೊಕ್ಕೆ ಮತ್ತು ಬಿಳಿಜೋಡು ಮೂಲಕ ದಾವಣಗೆರೆಗೆ ಯಾವ ವಾಹನ ಸೌಕರ್ಯವು ಇಲ್ಲದಿರುವುದು ಸಹಾ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಇದರಿಂದ ಜನರಿಗೆ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಸದರೀ ಮಾರ್ಗಗಳಲ್ಲಿ ಸರ್ಕಾರದವರು ಬಸ್ಸುಗಳನ್ನು ಓಡಿಸಲು ಕೂಡಲೇ ಕ್ರಮ ಕೈಗೊಳ್ಳುವರೇ ?

ಶ್ರೀ ವೀರಣ್ಣ (ಸಣ್ಣ ಉಳಿತಾಯ ಸಾರಿಗೆ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ

ಇ) ಬಹುತೇಕ ಗ್ರಾಮಗಳು ಪ್ರಸ್ತುತ ಬಸ್‌ಮಾರ್ಗಕ್ಕೆ ಹತ್ತಿರವಾಗಿರುವುದರಿಂದ ಗಮನಾರ್ಹ ಆನಾನುಕೂಲ ಉಂಟಾಗಿಲ್ಲ.

ಈ) ವಾಹನ ಯೋಗ್ಯ ರಸ್ತೆಗಳ ಅಭಾವದ ಕಾರಣಗಳಿಂದಾಗಿ ಸೂಚಿತ ಮಾರ್ಗಗಳಲ್ಲಿ ಪ್ರಯಾಣಿಕರ ರಸ್ತೆ ಸಾರಿಗೆಯನ್ನು ಪ್ರಾರಂಭಿಸಲು ಸಾಧ್ಯವಾಗದು

## ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್ ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದೆ ಮಂಡಿಸಲಾಯಿತು.

## ತುಮಕೂರು ತಾಲ್ಲೂಕಿಂ ಹಿರೇಗುಂಡಗಲ್ಲು ಗ್ರಾಮಕ್ಕೆ ಬಸ್ಸಿನ ಸೌಕರ್ಯ

೧೧೪೭, ಶ್ರೀ ಜಿ. ಎಸ್. ಶಿವನಂಜಪ್ಪನವರು (ಗುಬ್ಬಿ) ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಹಾಗೂ ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ತಾಲ್ಲೂಕು ಹಿರೇಗುಂಡಕಲ್ಲು ಗ್ರಾಮಸ್ಥರು ತಮ್ಮ ಊರಿಗೆ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ಕೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬಸ್ಸಿನ ಸೌಕರ್ಯವನ್ನು ಒದಗಿಸಲು ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ಮಂತ್ರಿಗಳು).—

ಅ) ಬಂದಿದೆ

ಆ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ತುಮಕೂರಿನಿಂದ ಹಿರೇಗುಂಡಕಲ್ಲಿಗೆ ಈ ಕೆಳಕಾಣಿಸಿದ ವೇಳೆಯಲ್ಲಿ ೪ ಟ್ರಿಪ್ಪುಗಳ ಸಾರಿಗೆ ಸೌಕರ್ಯವನ್ನು ಒದಗಿಸಿವೆ,

| | | | | | |
|---|---|---|---|---|---|
| ೧೭೦೦ | ೧೧೧೫ | ತುಮಕೂರು | ೦.೦ | ೧೦೧೦ | ೧೬೦೦ |
| ೧೬೩೫ | ೧೦೪೦ | ಹಿರೇಗುಂಡಕಲ್ | ೧೩.೦ ಕಿ.ಮಿ. | ೧೦೩೫ | ೧೬೨೫ |